# 35

# ಪ್ರೀತಿಯ ಕೊರತೆಯಲ್ಲಿರುವವರನ್ನು ಸಂಧಿಸುವದು

## ಮಾರ್ಕ 5:1-20, ಒಂದು ನಿಕಟ ನೋಟ

ಕೆಲವಾರು ವರ್ಷಗಳ ಹಿಂದೆ ಒಂದು ದೂರವಾಣಿ ಸಂಸ್ಥೆಯು, ತಮ್ಮ ಜಾಹಿರಾತನ್ನು ದೂರದರ್ಶನದಲ್ಲಿ ನೀಡಿ:

"ಒಬ್ಬರನ್ನು ಸಂದರ್ಶಿಸಿ, ಅವರನ್ನು ಸ್ಪರ್ಷಿಸಿ"[1] ಎನ್ನುತ್ತಿದ್ದರು. ಆ ಜಾಹಿರಾತಿನ ಸಮಯದಲ್ಲಿ ಅವರು ಮತ್ತೊಬ್ಬರ ಕರೆಗಾಗಿ ಕಾಯುತ್ತಾರೆ. ಹೌದು ನನ್ನ ಮನೆಯ ದೂರ ವಾಣಿಯ ರಶೀದಿಯನ್ನು ಗಮನಿಸಿದರೆ, "*ಅನೇಕರನ್ನು* ಸಂದರ್ಶಿಸಿ ಅವರನ್ನು ಸ್ಪರ್ಶಿಸಿದ ವಿಚಾರವನ್ನು ಅರಿಯಬಹುದಿತ್ತು."

ಇನ್ನೊಬ್ಬರನ್ನು ಸಂದರ್ಶಿಸುವದು ನೂತನವಾದದ್ದಾಗಿರುವದಿಲ್ಲ. "ಜನರನ್ನು-ಸಂಧಿಸುವವರಲ್ಲಿ" ಯೇಸು ಕ್ರಿಸ್ತನು ಮಾತ್ರ ಮಹಾ ಸಂದರ್ಶಕನಾಗಿದ್ದಾನೆ. ಆತನು ಹೋದಂಥ ಸ್ಥಳಗಳಲೆಲ್ಲಾ - ರೋಗಿಗಳನ್ನು ಕುರುಡರನ್ನು ಕುಂಟರನ್ನು ದುಃಖದಲ್ಲಿದ್ದವರನ್ನು ಹಾಗೂ ಪಾಪಿಗಳನ್ನು ಮುಟ್ಟಿದನು. ಆತನಿಂದ ಸ್ಪರ್ಶಿಸಲ್ಪಟ್ಟವರಲ್ಲಿ, ಹೊಸ ತನವು ಉಂಟಾಯಿತು.[2] ಸಭೆಗಳಲ್ಲಿ ನಾವುಗಳು ಯೇಸುವಿನ ಅನುಯಾಯಿಗಳೇ ಆಗಿರಬೇಕು (1 ಪೇತ್ರ 2:21). ಆತನು ನಮಗೆ ಶಿರಸ್ಸಾಗಿದ್ದಾನೆ (ಎಫೆಸ 1:21, 22). ನಾವುಗಳು ಆತನ ಕೈಕಾಲುಗಳು, ಆತನ ತುಟಿಗಳು[3] ಆಗಿದ್ದೇವೆ. ಆತನ ಮಹಾ ಆಜ್ಞೆಯ ಮೇರೆಗೆ (ಮತ್ತಾಯ 28:18, 20), ನಾವುಗಳು ಇತರರನ್ನು ಸುವಾರ್ತೆಯ ಮೂಲಕ ಮುಟ್ಟಿ ಸ್ಪರ್ಶಿಸದಿದ್ದರೆ ಆತನ ಸಭೆಯಾಗಿರುವದು ಅಸಾಧ್ಯ.

ಮಾರ್ಕ 5ರಲ್ಲಿ, ಯೇಸು ಒಬ್ಬ ಮನುಷ್ಯನ ಬಳಿ ಹೋಗಿ ಮುಟ್ಟಿದನು - ಅವನು ಯಾರೂ ಪ್ರೀತಿ ಮಾಡಲಾಗದ ಪರಿಸ್ಥಿತಿಯಲ್ಲಿದ್ದನು. ಅಲ್ಲಿ ದೆವ್ವ ಹಿಡಿದ ಇಬ್ಬರು ಇದ್ದರು ಎಂದು ಮತ್ತಾಯನು ತಿಳಿಸಿದರೆ ಅಲ್ಲಿ ಒಬ್ಬನಿದ್ದನು, ಎಂದು ಮಾರ್ಕ ಮತ್ತು ಲೂಕ ತಿಳಿಸುತ್ತಾರೆ. ಅವರಲ್ಲಿ ಭಯಂಕರವಾದ ಒಬ್ಬನ ಕುರಿತು ನಾನು ಮಾತಾಡುತ್ತೇನೆ. ಈ ಕಥೆಯಲ್ಲಿ ಸ್ವಾರಸ್ಯಮಯ ಸಂಗತಿಗಳು ಅಡಗಿವೆ.

### ಸತ್ಯಾಂಶ (ವಚನಗಳು 1-5)

**ನಿಜವಾದ ಸಮಸ್ಯೆ**

ವಾಕ್ಯಭಾಗ ಮುಂದುವರೆಯುತ್ತದೆ:

> ಆ ಮೇಲೆ ಅವರು ಸಮುದ್ರದ ಆಚೇದಡಕ್ಕೆ ಗೆರಸೇನರ ಸೀಮೆಗೆ ಮುಟ್ಟಿದರು. ಆತನು ದೋಣಿಯಿಂದ ಇಳಿದುಬಂದ ಕೂಡಲೆ ದೆವ್ವಹಿಡಿದವನೊಬ್ಬನು ಸಮಾಧಿಯ ಗವಿಗಳೊಳಗಿಂದ ಆತನೆದುರಿಗೆ ಬಂದನು. ಅವನಿಗೆ ಸಮಾಧಿಯ ಗವಿಗಳೇ ವಾಸ ಸ್ಥಳವಾಗಿದ್ದವು. ಅವನನ್ನು ಅನೇಕಸಾರಿ ಬೇಡಿಗಳಿಂದಲೂ ಸರಪಣಿಗಳಿಂದಲೂ ಕಟ್ಟಿದ್ದರೂ ಅವನು ಸರಪಣಿಗಳನ್ನು ಕಿತ್ತು ಬೇಡಿಗಳನ್ನು ಮುರಿದು ಹಾಕಿದ್ದನು; ಅವನನ್ನು ಇನ್ನು ಯಾರೂ ಸರಪಣಿಯಿಂದಾದರೂ ಕಟ್ಟಲಾರದೆ ಹೋದರು; ಅವನನ್ನು ಹತೋಟಿಗೆ ತರುವದಕ್ಕೆ ಯಾರಿಂದಲೂ ಆಗಲಿಲ್ಲ. ಅವನು ನಿತ್ಯ ರಾತ್ರಿಹಗಲು ಸಮಾಧಿಯ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು

ಕಡಿದುಕೊಳ್ಳುತ್ತಾ ಇದ್ದನು (ವಚನಗಳು 1-5).

ಒಂದು ಚಿತ್ರಣವನ್ನು ನೆನಪು ಮಾಡಿರಿ: ಕಠಿಣ ಶ್ರಮದ ನಂತರ, ಸಾಯಂಕಾಲವಾಯಿತು (4:35ಎ). ಆಗ ಕ್ರಿಸ್ತನು ತನ್ನ ಶಿಷ್ಯರಿಗೆ, "ಆಚೆದಡಕ್ಕೆ ಹೋಗೋಣ ಅಂದನು" (4:35ಬಿ) - ಅಂದರೆ ಗಲಿಲಾಯ ಸಮುದ್ರದ ಇನ್ನೊಂದು ದಡಕ್ಕೆ (ನೋಡಿ 4:36; 5:1). ಸ್ವಲ್ಪ ಕಾಲ ಜನರಿಂದ ಪ್ರತ್ಯೇಕವಾಗಿ ಇರುವ ಕಾರಣದಿಂದ, ಯೇಸು ಆಗಾಗ್ಗೆ ಈ ರೀತಿ ಮಾಡುತ್ತಿದ್ದನು. ಅವರು ಪ್ರಯಾಣ ಮಾಡುತ್ತಿದ್ದ ಸಂದರ್ಭದಲ್ಲಿ, ಯೇಸು ಆಯಾಸಗೊಂಡದ್ದರಿಂದ ನಿದ್ರೆ ಮಾಡುತ್ತಿದ್ದನು (4:38). ಅಲ್ಲಿ ಬಿರುಗಾಳಿ ಏಳಲು, ಯೇಸು ಅದನ್ನು ಶಾಂತಪಡಿಸಿದ್ದನು (4:36-41). ಈ ಘಟನೆ ನಡೆಯುವ ಸಮಯದಲ್ಲಿ ಅವರು ಸುಮಾರು ನಾಲ್ಕರಿಂದ ಐದು ಮೈಲುಗಳ ಪ್ರಯಾಣ ಮಾಡಿ, ಗೆರಸೇನರ ಸೀಮೆಗೆ ಬಂದರು (5:1), ಅದು ಸಮುದ್ರದ ಪೂರ್ವ ಭಾಗದಲ್ಲಿತ್ತು.

ಯೇಸು ವಿಶ್ರಾಂತಿಗಾಗಿ ನಿರ್ಜನ ಪ್ರದೇಶಕ್ಕೆ ಹೂದಾಗ್ಯೂ ಅತನಿಗೆ ವಿಶ್ರಾಂತಿ ದೊರೆಯಿಲಿಲ್ಲ, "ಅತನು ದೋಣಿಯಿಂದ *ತಕ್ಷಣ* ಇಳಿದು ಬಂದ ಕೂಡಲೆ ದೆವ್ವ[4] ಹಿಡಿದ್ದಿವನೊಬ್ಬನು ಸಮಾದಿಗಳಿಂದ ಅತನೆದುರಿಗೆ ಬಂದನು" (ವಚನ 2; ಒತ್ತಿ ಹೇಳಿದ್ದು ನನ್ನದು). ಈ ಕುರಿತು ಸ್ವರ್ಟ್‌ರವರು ಬರೆದು:

> ಗಲಿಲಾಯದ ಸಮುದ್ರ ತೀರದ ಸುಣ್ಣದ ಕಲ್ಲುಗಳಿಂದ ತುಂಬಿದ್ದು, ಅಲ್ಲಿ ಅನೇಕ ಗುಹೆಗಳಿದ್ದವು ಇವು ಅ ತೀರದ ಒಂದು ಭಾಗವಾಗಿತ್ತು, ಈಸಮಾದಿಯ ಗವಿಗಳಲ್ಲಿ ಸತ್ತವರ ಅನೇಕ ಶವಗಳನ್ನು ಇಟಿದ್ದರು, ಅದು ನಿರ್ಜನ ಪ್ರದೇಶವಾಗಿದ್ದರೂ, ರಾತ್ರಿಕಾಲದಲ್ಲಿ ಅದು ಭಯಕರವಾದ,[5] ವಾತಾವರಣವನ್ನು ಹೊಂದಿತ್ತು ಅಸಮಾಧಿಗಳಿಂದ ದೆವ್ವ ಹಿದಿದ ಮನುಷ್ಯನು ಬಂದನು ...[6]

ಅ ಮನುಷ್ಯನು ಏಕೆ ಸಮಾಧಿಗಳಲ್ಲಿದ್ದನು? ಯಾಕೆಂದರೆ ಅವನು ಸಮಾಜದ ತಿರಸ್ಕಾರಕ್ಕೆ ಒಳಗಾಗಿದ್ದನು. ಅವನನ್ನು ಜನರು ಸರಪಣಿಗಳಿಂದ ಬಿಗಿದಿದ್ದರು, ಅದರೆ ಅವನು ಹತೂಟಿ ಮೀರಿದ್ದನು ಅದ್ದರಿಂದ ಜನರು ಅವನನ್ನು ಈ ಸ್ಥಳದಲ್ಲಿ ಹಾಕಿದ್ದರು,

ವಚನ 1-5ರವೆರಿಗಿನ ಚಿತ್ರಣವು ನಿಮ್ಮಲಿದೆಯಾ?ಯೇಸು ದೋಣಿಯಿಂದ ಇಳಿದ ತಕ್ಷಣವೇ ದೆವ್ವಹಿಡಿದ ಮನುಷ್ಯನು ಎದುರಾದನು. ಅವನು ಬೆತ್ತಲೆಯಿಂದ ಕೊಳಕ್ಕಾಗಿದ್ದನು. ಅವನು ತನ್ನ ದೇಹವನ್ನು ಗಾಯ ಪಡಿಸಿಕೊಂಡಿದ್ದರಿಂದ, ರಕ್ತಸುರಿಯುತ್ತಿತ್ತು. ಅವನ ತಲೆಗೂದಲು ಗಂಟಾಗಿತ್ತು, ಕಣ್ಣುಗಳು ಭಯಂಕರವಾಗಿತ್ತು, ಇಂಥಹ ಮನುಷ್ಯನು ಯೇಸುವಿನ ಸ್ಪರ್ಷದ ಅಗತ್ಯವಿತ್ತು. ಅವನನ್ನು ಸಂಧಿಸುವದು ಯೇಸುವಿನ ಉದ್ದೇಶವಾಗಿತ್ತು.

**ಕಾರಣಗಳ ಊಹೆ**

ಯೇಸು, ತಾನೆ ಈ ಕೊರತೆಗಳನ್ನು ನೀಗಿಸಿದನು.

(1) ನಾನು ಬಹಳ ಆಯಾಸಾಗಿದ್ದೇನೆ. ಎಂದು ಹೇಳಬಹುದಿತ್ತು, "ಬಹಳ ಶ್ರಮದ ದಿನವನ್ನು ಅನುಭವಿಸಿದ್ದೇನೆ ಎಂದು ಹೇಳಬಹುದಿತ್ತು!" ಆಯಾಸ ಅನುಭವಗಳನ್ನು ನಾವುಗಳು ಸಹ ಅನುಭವಿದ್ದೇವೆ. ನಮ್ಮೊಂದಿಗೆ ಆಯಾಸಗೊಂಡ ಇತರರೂ ಇದ್ದಾರೆ.[7] ಕೆಲವರು ಬಿಲ್ಲುಗಳನ್ನು ನೀಡುವದಕ್ಕಾಗಿ ಶ್ರಮಪಡುತ್ತಾರೆ. ಕೆಲವು ಕುಟುಂಬಗಳಲ್ಲಿ, ತಾಯಿ ದೂರ ಹೋಗಿ ದುಡಿಯುತ್ತಾಳೆ. ಆದ್ದರಿಂದ ಕೆಲಸದ ನಂತರ, ನಾವು ಆಯಾಸಕೊಳ್ಳುತ್ತೇವೆ, ಸಮಯ ಹಾಗೂ ಶಕ್ತಿಯನ್ನು ಕಳೆದು ಕೊಳ್ಳುತ್ತೇವೆ, ಆದರೆ ಸೇವಾ ವಿಷಯದಲ್ಲಿಯಾಗಲೀ, ಸಭಾ ಸೇವೆಯ ವಿಷಯದಲ್ಲಾಗಲೀ, ಆಸಕ್ತಿ ಇರುವದಿಲ್ಲ.

(2) "ಇದು ನನ್ನ ಜವಾಬ್ದಾರಿಯಲ್ಲ" ಎಂದು ಆತನು ಹೇಳಬಹುದಿತ್ತು. ಆ ಮನುಷ್ಯನ ಮನೆಯು ಹತ್ತಿರದಲ್ಲಿತ್ತು (ಮಾರ್ಕ 5:19; ನೋಡಿ ಲೂಕ 8:39), "ಆ ಮನೆಯವನೇ ಅವನ

ಜವಾಬ್ದಾರಿ ಎಂದು ಹೇಳಬಹುದಿತ್ತು. ಯಾಕೆಂದರೆ ನಾನು *ಆಯಾಸಗೊಂಡು,* ವಿಶ್ರಾಂತಿಗಾಗಿ ಇಲ್ಲಿಗೆ ಬಂದಿದ್ದೇನೆ!" ಬೇರೆ ಯಾರಾದರೂ ಅವನ ವಿಷಯದಲ್ಲಿ ಚಿಂತಿಸಲಿ ಎಂದು ಆತನು ಹೇಳಬಹುದಿತ್ತು, ಸಮಾಜದಲ್ಲಿನ ಕೊರತೆಯನ್ನು ನೀಗಿಸಲು, ವ್ಯಯಕ್ತಿಕವಾದ ಜವಾಬ್ದಾರಿಯನ್ನು ಹೊರಬೇಕು, ಇದು ಅತಿ ಅಗತ್ಯವಾಗಿದೆ.[8] ಸಭೆಯಲ್ಲೂ, ವ್ಯಯಕ್ತಿಕ ಜವಾಬ್ದಾರಿಯ ಅಗತ್ಯವಿದೆ.[9]

(3) ಮನ ಪರಿವರ್ತನೆ ಮಾಡಲು ಇದು ಯೋಗ್ಯವಾದ ಸಮಯ*ವಲ್ಲ* ಎಂದು ಆತನು ಹೇಳಬಹುದಿತ್ತು. ಉದಾಹರಣೆ ಸುವಾರ್ತೆಯನ್ನು ಸಾರಲು ಮನೆ ಮನೆಗೆ ತೆರಳಬಹುದಾದಗ, ಮಾರ್ಕ 5ರಂತೆ ದೆವ್ವ ಹಿಡಿದವರಲ್ಲಿ ಒಬ್ಬನಂತಿದ್ದ ಯಾರಾದರು ಎದುರಾದರೆ ಸುವಾರ್ತೆ ಸಾರಲು ಹೋದವರು ಆ ವಿಕೃತ ಮನುಷ್ಯನ ಬಗ್ಗೆ ಯಾವುದೇ ವಿಧವಾದ ಮಾಹಿತಿಯನ್ನು ನೀಡುವದೇ *ಇಲ್ಲ* ಸುವಾರ್ತೆಗೆ ಆಸಕ್ತಿವುಳ್ಳವರಿಗಾಗಿ ಮಾತ್ರ ನಾವುಗಳು ಸುವಾರ್ತೆ ಸಾರಲು ಬಯಸುತ್ತೇವೆ. ಭಾರವುಳ್ಳವರ ಕುರಿತಾಗಿ ನಮ್ಮಲ್ಲಿ ಅನೇಕರು ಅಧ್ಯಯನ ಮಾಡುವದೇ *ಇಲ್ಲ.*

(4) ಇದು ಸಮಸ್ಯೆಯ ಸಂಗತಿಯಲ್ಲವೇ ಎಂದು ಹೇಳಿರಬಹುದಿತ್ತು? "ನಾನು ಸಹಾಯಮಾಡಲು ಮುಂದಾದರೂ ಅದರಲ್ಲಿ ಯಾವ ಪ್ರಯೋಜನವಿಲ್ಲ? ಎಂದು ಹೇಳುತ್ತೇವೆ, ಒಂದು ವೇಳೆ ಅಂಥವರು ನನ್ನ ಬಗ್ಗೆ ಸಂತೋಷ ಪಡದೆ ಇರಬಹುದು." ಒಂದು ವೇಳೆ ಅವರಿಂದ ಏಟು ಬೀಳಬಹುದೆಂಬ ಸಂಶಯವೂ ಇರಬಹುದು! ನಮ್ಮ ಸಂಬಂಧಗಳಲ್ಲಿ ಅಭ್ಯಾಂತರ ಉಂಟಾಗಬಹುದೆಂದು ಸುವಾರ್ತೆ ಸಾರಲು ಮುಂದಾಗುವ*ದಿಲ್ಲ?* ಗೆರಸೇನರು ಜನರು ಯೇಸು ಮಾಡಿದ ಕಾರ್ಯಗಳ ಮೇಲೆ ಮನಸ್ಸಿಡದೆ ನಮ್ಮ ಸೀಮೆಯನ್ನು ಬಿಟ್ಟು ಹೋಗಬೇಕೆಂದು ಯೇಸುವಿಗೆ ಬೇಡಿ ಕೊಂಡರು (ಮಾರ್ಕ 5:17).

**ಯಥಾರ್ಥವಾದ ಚಿಂತನೆ**

ಈ ಕೊರತೆಯನ್ನು ಯೇಸು ಹೇಗೆ ನಿವಾರಿಸಿದನು, ನಾನು ನೀಡಿರುವ ಸಲ ಕಾರಣಗಳನ್ನು ಯೇಸು ನೀಡಬಹುದಿತ್ತು - ಆದರೆ ಆತನು ಆ ರೀತಿ ಮಾಡಲಿಲ್ಲ. ಸ್ವಭಾವಿಕವಾದ ಅಭ್ಯಾಂತರಗಳನ್ನು ಹೇಗೆ ಜಯಸಿದನು? *ಆತನು ಜನರನ್ನು ಪ್ರೀತಿಸಿದನು.* ಯೇಸು ಜನರ ಪರವಾಗಿದ್ದನು; ಜನರಿಗಾಗಿ ಚಿಂತಿಸಿದನು. ಇಲ್ಲಿ ಒಬ್ಬನಿಗೆ ಯೇಸುವಿನ ಅಗತ್ಯವಿತ್ತು. ಅವನು ಪ್ರೀತಿ ಹೊಂದದವನಾಗಿದ್ದನು, ಪ್ರೀತಿಯ ಕೊರತೆಯಲ್ಲಿದ್ದನು. ಸಾಮಾನ್ಯ ಜೀವಿತವನ್ನು ಕಳಕೊಂಡಿದ್ದನು; ಜೀವಿತದ ಸೀಮಿತ ಕಳಕೊಂಡಿದ್ದನು. ತನ್ನ ದೇಹವನ್ನು ನಾಶಮಾಡಿಕೊಳ್ಳುತ್ತಿದ್ದನು, ಒಂದು ವೇಳೆ ಆತ್ಮಹತ್ಯೆಗೂ ಪ್ರಯತ್ನಿಸಿರಬಹುದು. ಹೇಗೂ ಅವನು ಕೊರತೆವುಳ್ಳವನಾಗಿದ್ದನು. ಯೇಸು ಆಯಾಸಗೊಂಡಿದ್ದರೂ, ಈ ವ್ಯಕ್ತಿಯಲ್ಲಿ ಆಕರ್ಷಣೆ ಇಲ್ಲದಿದ್ದರೂ ಇತರರು ಇವನ ಕುರಿತು ಹೊಣೆ ಹೊಂದದ್ದಿರೂ, ಯೇಸು ಪ್ರಯಾಸದಿಂದ ಆ ಮನುಷ್ಯನನ್ನು ಸ್ಪರ್ಷಿಸಿದನು.

## ಪ್ರತಿಕ್ರಿಯೆ (ವಚನಗಳು 6-16) ನಾವು ಓದುವುದನ್ನು ಮುಂದುವರಿಸೋಣ

**ಯೇಸುವಿನ ಪ್ರಭಾವ**

ನಾವು ಮುಂದುವರೆಸಿ ಓಡೋಣ: "ಅವನು ಯೇಸುವನ್ನು ದೂರದಿಂದ ಕಂಡು ಓಡಿ ಬಂದು ಆತನಿಗೆ ಮಹಾಶಬ್ದದಿಂದ ಆರ್ಭಟಿಸಿ - ಯೇಸುವೇ ಪರಾತ್ಪರನಾದ ದೇವರ ಮಗನೇ ನನ್ನಗೊಡವೆ ನಿನಗೇಕೆ? ಅಂದನು" (ವಚನಗಳು 6, 7ಎ). "ದೆವ್ವಗಳು ಹೆದರಿ ... ನಡುಗುತ್ತೇವೆ" ಎಂದು ಯಾಕೋಬನು, ಸಹ ಹೇಳಿರುವನು (ಯಾಕೋಬ 2:19).

"ನಮ್ಮನ್ನು ಕಾಡಬೇಡ" ಎಂಬ ಮಾತು ಅವನಿಂದ ಬಂತು: "ದೇವರಾಣೆ ನನ್ನನ್ನು

ಕಾಡಬೇಡ!" (ವಚನ 7ಬಿ). ಆತನು ಅವನನ್ನು ಕಾಡದೆ, ಗುಣಪಡಿಸಿದನು - ಹೌದು ಅವನಲ್ಲಿದ್ದ ದೆವ್ವವು ಈ ರೀತಿಯಾಗಿ ಮಾತನಾಡಿತು.

ಮತ್ತಾಯನ ಪ್ರಕಾರವಾಗಿ ಅವುಗಳು ಆತನಿಗೆ, "ಕಾಲ ಬರುವದಕ್ಕಿಂತ ಮುಂಚೆ ನಮ್ಮನ್ನು ಕಾಡುವದಕ್ಕೆ ಇಲ್ಲಿಗೆ ಬಂದಿಯಾ?" ಎಂದಿದೆ (ಮತ್ತಾಯ 8:29). ಸೈತಾನನ ಆತ್ಮಗಳಿಗೂ ಸೈತಾನನಿಗೂ ತೀರ್ಪಾಗಿ, ಅವುಗಳನ್ನು ಬೆಂಕಿಯ ಕೆರೆಗೆ ದೊಬ್ಬಲ್ಪಡುವ, ನಿತ್ಯವಾದ ಶಿಕ್ಷೆಯು ಕಾಲವು ಬರಲಿದೆ (ನೋಡಿ 2 ಪೇತ್ರ 2:4; ಪ್ರಕಟನೆ 19:20; 20:10). ದೆವ್ವಗಳು ಚಿಂತಿಸಿದ ಕುರಿತಾಗಿ ವಚನ 8ರಲ್ಲಿ: "ಎಲ್ಲಾ ದೆವ್ವಾ ಇವನನ್ನು ಬಿಟ್ಟು ಹೋಗು ಎಂದು ಯೇಸು ಹೇಳಿದ್ದನು!"

ಯೇಸು ಅದಕ್ಕೆ, "ನಿನ್ನ ಹೆಸರೇನು?" ಎಂದು ಕೇಳಿದಕ್ಕೆ, "ನನ್ನ ಹೆಸರು ದಂಡು; ಯಾಕಂದರೆ, ನಾವು ಬಹು ಮಂದೆ ಇದ್ದೇವೆ" (ವಚನ 9). ರೋಮಾಯರು ಸುಮಾರು ಆರು ಸಾವಿ ಸೈನಿಕರಿರುವ ಒಂದು ತುಕಡಿಗೆ "ದಂಡು" ಎನ್ನುತ್ತಿದ್ದರು. ಅವನು ಅನೇಕ ದೆವ್ವಗಳಿಂದ ಹಿಡಿಯಲ್ಪಟ್ಟಿದ್ದನು ಎಂಬ ಸೂಚನೆಯು ಇಲ್ಲಿರುತ್ತದೆ. ಆದರೆ ಅಕ್ಷರಶಃ ಅವನು ಆರು ಸಾವಿರ ದೆವ್ವಗಳನ್ನು ಹೊಂದಿರಲಿಲ್ಲ (ಬೇಗನೇ ಅವುಗಳು *ಎರಡು ಸಾವಿರ* ಹಂದಿಗಳೊಗೆ ಹೋಗುವದರಕ್ಕಿದ್ದವು [ವಚನ 13].)

ದೆವ್ವ ಹಿಡಿದವನು ಆರಂಭದಲ್ಲಿ: *"ನನ್ನ* ಹೆಸರು ದಂಡು" ಎಂಬ ಏಕವಚನವನ್ನು ಬಳಸಿರುವನು, ನಂತರ ಅವನು:*"ನಾವು* ಬಹಳ ಮಂದಿ" ಎಂಬ ಬಹು ವಚನ ಪ್ರಯೋಗ ಮಾಡಿರುವನು. ಇಂತಹ ಅನೇಕ ದೆವ್ವಗಳಿಂದ ಬಾಧಿತನಾದ ಆ ಮನುಷ್ಯನ ಬಾಧೆಗಳು ಎಷ್ಟಿತ್ತೆಂದು ನಾನು ಊಹಿಸಲಾರೆ, ಅದು ಅವನನ್ನು ಹುಚ್ಚನನ್ನಾಗಿ ಮಾಡಿರಬಹುದು.[10]

"ಅವುಗಳು ನಮ್ಮನ್ನು ಈ ಸೀಮೆಯಿಂದ ಹೊರಡಿಸಬೇಡವೆಂದು ಆತನನ್ನು ಬಹಳವಾಗಿ ಬೇಡಿಕೊಂಡವು" (ವಚನ 10). ಲೂಕನ ಪ್ರಕಾರ, "ಅವುಗಳು ಪಾತಾಳಕ್ಕೆ ಹೋಗಿ ಬಿಡುವಂತೆ, ನಮಗೆ ಆಜ್ಞೆ ಮಾಡಬೇಡವೆಂದು ಬೇಡಿಕೊಂಡವು"[11] (ಲೂಕ 8:31). ಪಾತಾಳವು ದೆವ್ವಗಳು ವಾಸಿಸುವ ಸಾಮಾನ್ಯ ಸ್ಥಳವಾಗಿತ್ತು, ಆ ಸ್ಥಳಕ್ಕೆ ಹಿಂದಿರುಗಲು ಅವುಗಳಿಗೆ ಮನಸ್ಸಿರಲಿಲ್ಲ. ಕರ್ತನು ಅವುಗಳಿಗೆ ಒತ್ತಾಯ ಪಡಿಸಬಾರದೆಂದು ಬೇಡಿಕೊಂಡವು. ಕೆಲಕಾಲ ತಮ್ಮ ಕಾರ್ಯಗಳನ್ನು ಮುಂದುವರೆಸಲು ಬಯಸಿದ್ದವು.

"ಅಲ್ಲಿಯ ಗುಡ್ಡದಲ್ಲಿ ಹಂದಿಗಳ ದೊಡ್ಡ ಹಿಂಡು ಮೇಯುತ್ತಿತ್ತು" (ಮಾರ್ಕ 5:11). ಆಗ ದೆವ್ವಗಳು ಕ್ರಿಸ್ತನಿಗೆ, "ಆ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ನಮ್ಮನ್ನು ಕಳುಹಿಸಿಕೊಡು ಎಂದು ಬೇಡಿಕೊಂಡವು" (ವಚನ 12). ಅವುಗಳು ಈ ವಿಚಿತ್ರವಾದ ಮನವಿಯನ್ನು ಏಕೆ ಮಾಡಿಕೊಂಡವು? ಪ್ರಾಯಶಃ ಪಾತಾಳದ ಹೊರತಾಗಿ ಜೀವವಿರುವ ಗುಂಪಿನಲ್ಲಿ ಮಾತ್ರ ಅವುಗಳು ಬದುಕಲು ಸಾಧ್ಯವಿರಬಹುದು. ನನಗೆ ತಿಳಿದಿರುವ ಹಾಗೆ, ಬೆಚ್ಚಗಿರುವ ದೇಹಗಳನ್ನು ಹೊರತುಪಡಿಸಿ ಚಿಗಟಗಳು ಬದುಕಲಾರವು. ಬೆಚ್ಚಗಿರುವ ದೇಹಗಳು ತಣ್ಣಗಾಗುವ ಪರಿಸ್ಥಿತಿಯಲ್ಲಿ, ಅವುಗಳು ಮತ್ತೊಂದು ಬೆಚ್ಚಗಿನ ದೇಹಗಳು ಬಯಸುತ್ತವೆ, ಅಂಥಹ ದೇಹಗಳು ದೊರಕುವಾಗ, ಅಲ್ಲಿ ಅವುಗಳು ತಮ್ಮ ಕಾರ್ಯವನ್ನು ಮುಂದುವರೆಸುತ್ತವೆ. "ಒಂದು ವೇಳೆ ದೆವ್ವಗಳು ಸಹ ಇದೇ ವಿಧದಲ್ಲಿ ಇರಬಹುದು. ಹಾಗು ಹಂದಿಗಳೊಳಗೆ ಹೋಗುವದಕ್ಕೆ ಅವುಗಳಿಗೆ ಅಪ್ಪಣೆ ದೊರೆಯಿತು. ಆ ದೆವ್ವಗಳು ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು" (ವಚನ 13ಎ).

ದೆವ್ವದ ದಂಡು ತಮ್ಮ ಕಾರ್ಯಚರಣೆಯನ್ನು ಮುಂದುವರೆಸಲು ಪ್ರಯತ್ನಿಸಿದರೆ, ಅವುಗಳು ನಿರಾಶೆಗೊಳ್ಳುತ್ತವೆ. ಯಾಕಂದರೆ ಅವುಗಳು ಹೊಕ್ಕಿಕೊಂಡ ಹಂದಿಗಳು ಭ್ರಮೆಗೊಂಡವು. "ಆ ಗುಂಪು ಓಡಿ ಕುಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ಅಲ್ಲಿ ಉಸಿರುಕಟ್ಟಿ ಸತ್ತವು. ಹೆಚ್ಚು ಕಡಿಮೆ ಎರಡು ಸಾವಿರ ಹಂದಿಗಳಿದ್ದವು" (ವಚನ 13ಬಿ). ಎಂಥಾ ಒಂದು ದೃಷ್ಟಿ! ಎಂಥ ವಿಚಿತ್ರ ಶಬ್ದ! ಹಂದಿ ಸಾಕಾಣಿಕಾ ಸ್ಥಳದಲ್ಲಿ ನೀವು ವಾಸಿಸಿದ್ದರೆ, ಹಂದಿಗಳು ಮಾಡುವ

ಶಬ್ದವನ್ನು ಅರಿಯಬಹುದು. ಅವುಗಳು ಕೂಗುವಾಗ ಬೆನ್ನಿನ ಮೇಲಿನ ಕೂದಲುಗಳು ನೆಟ್ಟಗಾಗಿರುತ್ತವೆ.[12] ಎರಡು ಸಾವಿರ ಹಂದಿಗಳು ... ಒಟ್ಟಾಗಿ ಶಬ್ದ ಮಾಡುತ್ತಾ ಗುಡಿಗಿನಂತೆ ... ನೀರಿಗೆ ಬೀಳುವದನ್ನು ಊಹಿಸಿಕೊಳ್ಳಿರಿ!

ಪಟ್ಟಣದ ಹಂದಿಯ ಸಾಹುಕಾರರ ಆಳುಗಳು ಈ ದೃಷ್ಯವನ್ನು ಗಮನಿಸುತ್ತಿದ್ದರು.[13] "ಅವುಗಳನ್ನು ಮೋಹಿಸುವವರು ಓಡಿಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಿದರು" (ವಚನ 14ಎ). "ದೆವ್ವ ಹಿಡಿದಿದ್ದವನಿಗೆ ಹೀಗೆ ಹೀಗಾಯಿತೆಂಬುದನ್ನು ಹಂದಿಗಳ ವಿಷಯವನ್ನು ವಿವರಿಸಿದರು" (ವಚನ 16).

> ಅವುಗಳನ್ನು ಮೇಯಿಸುವವರು ಓಡಿಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಲು ಜನರು ನಡೆದ ಸಂಗತಿ ಏನೆಂದು ನೋಡುವದಕ್ಕೆ ಹೊರಟು ಯೇಸು ಇದ್ದಲಿಗೆ ಬಂದು ಆ ದೆವ್ವಹಿಡಿದಿದ್ದವನು, ಅಂದರೆ ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟಿದ್ದವನು, ಬಟ್ಟೆಗಳನ್ನು ಹಾಕಿಕೊಂಡು ಸ್ವಸ್ಥಬುದ್ಧಿಯಿಂದ ಕೂತಿರುವದನ್ನು ನೋಡಿ ಹೆದರಿದರು (ವಚನಗಳು 14ಬಿ, 15ಎ).

ಭಯಂಕರನಾಗಿದ್ದ ಆ ಮನುಷ್ಯನು ಈಗ ಸ್ವಸ್ಥ ಬುದ್ದಿಯಿಂದ "ಕುಳಿತ್ತಿದ್ದನು" ಅವನು ಬೆತ್ತಲೆಯಾಗಿರದೆ, "ಬಟ್ಟೆಗಳನ್ನು" ಹಾಕಿಕೊಂಡಿದ್ದನು. ಬುದ್ದಿ ಇಲ್ಲದವನಾಗಿರದೇ "ಬುದ್ದಿವುಳವನಾಗಿದ್ದನು." ಪ್ರೀತಿಯನ್ನು ಹೊಂದದ ಮನುಷ್ಯನನ್ನು ಯೇಸು ಸಂಧಿಸಿ, ಸ್ಪರ್ಷಿಸಿದಾಗ, ಅವನ ಜೀವನ ಬದಲಾಯಿತು.

**ಯೇಸುವಿಗಿದ್ದ ಸ್ಪೂರ್ತಿ**

ಪ್ರೀತಿ ಹೊಂದದವರನ್ನು ಹೇಗೆ ಯೇಸು ಸಂಧಿಸಿದನು? ಆತನನ್ನು ಜನರನ್ನು ಪ್ರೀತಿಸಿದ್ದರಿಂದ ಇದನ್ನು ಮಾಡಿದನು ಎಂದು ಈ ಹಿಂದೆಯೇ ತಿಳಿದಿರುವೆನು, ಆದರೆ ಅದಕ್ಕೆ ಇನ್ನೂ ಕೆಲವು ಆಲೋಚನೆಗಳನ್ನು ತಿಳಿಸುವೆನು:

(1) ಜನರ ಕೊರತೆಗಳನ್ನು ಯೇಸು ಸೂಕ್ಷ್ಮವಾಗಿ ಅರಿತ್ತಿದ್ದನು. ಸಹಾಯ ಮಾಡುವ ಅವಕಾಶಕ್ಕೆ ಕಾದಿದ್ದನು. ದೆವ್ವ ಹಿಡಿದವನೆಂದು ಆ ವ್ಯಕ್ತಿಯನ್ನು ಗುರುತಿಸದೆ, ಅವನ ಆತ್ಮ ಕೊರತೆಯಲ್ಲಿದೆ ಎಂದು ಅರಿತ್ತಿದ್ದನು, ಇಲ್ಲಿ ಯೇಸುವಿಗೆ ಒಂದು ಅವಕಾಶ ದೊರೆಯಿತು.

(2) ವ್ಯಕ್ತಿಯ ಕೊರತೆಯನ್ನು ಅರಿತು, ಅಲ್ಲಿ ಆತನು ಇದ್ದನು. ಒಂದು ವೇಳೆ ಯೇಸು ಅವನಿಗೆ, "ನಿನ್ನನ್ನು ತೊಳೆದು, ನಿನಗೆ ವಸ್ತ್ರಗಳನ್ನು ತೊಡಿಸಿ, ನಂತರ ನಿನ್ನಲಿರುವ ದೆವ್ವದ ಬಗ್ಗೆ ಮಾತನಾಡುತ್ತೇನೆ ಎಂದು ಹೇಳಬಹುದಿತ್ತು." ಅವನ ಹೊರಗಿನ ದೇಹದ ಕಡೆಗೆ ಗಮನಿಸದೆ, ಅವನ ಒಳಗಿದ್ದ ದೆವ್ವಗಳನ್ನು ಬಿಡಿಸಿದನು. ನಂತರ ಅವನು ಬಟ್ಟೆಗಳನ್ನು ಹಾಕಿಕೊಂಡನು ಎಂದು ವಾಕ್ಯ ಮುಂದುವರೆಯುತ್ತದೆ. ನಾವು ಜನರನ್ನು ಸಂಧಿಸುವಾಗ, ಮೊದಲು ಅವರು ದೇವರ ಕಡೆಗೆ ತಿರುಗಿಕೊಳ್ಳಬೇಕು ಎಂದು ಪ್ರಯತ್ನಿಸಬೇಕು. ನಂತರ ಅವರು ದೇವರ ಚಿತ್ತವನ್ನು ಅರಿಯುವಂತೆಮಾಡಬೇಕು. ಜನರು ಇಂಥಲ್ಲಿ ಇರಬೇಕೆಂದು ಬಯಸದೆ, ಜನರು ಇರುವಲ್ಲಿಯೇ ಕಾರ್ಯಗಳನ್ನು ನಾವುಗಳು ಮಾಡಬೇಕು.

(3) ಯೇಸು ಅವನ್ನೊಂದಿಗೆ ಮಾತನಾಡಿ ಅವನ ಸಮಸ್ಯೆಯನ್ನು ಕೇಳಿದನು. ಅವರ ಸಮಸ್ಯೆಗಳನ್ನು ಅರಿಯಲು, ಸಾವಿರಾರು ದೆವ್ವಗಳ ಮಾತನ್ನು ಯೇಸು ಆಲಿಸಿದನು. ಇನ್ನೊಬ್ಬರ ಸಮಸ್ಯೆಯನ್ನು ಆಲಿಸುವಂಥದ್ದು ಕಳೆದುಹೋದ ಕಲೆಯಾಗಿದೆ. ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳುವದಕ್ಕಿಂತಲೂ ಆಲಿಸುವದು ಲೇಸು.

(4) ಆತನು ದೇವರ ಶಕ್ತಿಯನ್ನು ಆತುಕೊಂಡಿದ್ದನು. ಮನುಷ್ಯನ ಮಾನಸಿಕ ಶಾಸ್ತ್ರದಿಂದ ಮನುಷ್ಯರು ಬದಲಾಗದೆ, ದೇವರ ಶಕ್ತಿಯಿಂದ ಬದಲಾಗುವರು. ಯೇಸು ಹೊಂದಿದ ಅದ್ಭುತ ಶಕ್ತಿಯನ್ನು ನಾವು ಹೊಂದಿರುತ್ತೇವೆ. ದೇವರ ವಾಕ್ಯದ ಭಲವನ್ನು ಹೊಂದಿದ್ದೇವೆ

(ರೋಮಾಪುರ 1:16) ಮತ್ತು ದೇವ ಶಕ್ತಿಯು ನಮ್ಮಲ್ಲಿ ಕಾರ್ಯಮಾಡುತ್ತಿದೆ (ಎಫೆಸ 3:20). ನಾವು ಹೊಂದಿರುವ ಅಲ್ಪ ಶಕ್ತಿಯಲ್ಲಿ ಭರವಸವಿಡದೆ ಆತನನ್ನೆ ಅವಲಂಭಿಸೋಣ.

## ಪ್ರತಿಫಲ (ವಚನಗಳು 15-20)

ಪ್ರೀತಿ ಹೊಂದದಿದ್ದವರನ್ನು ಯೇಸು ಸಂಧಿಸಿದಾಗ, ಅವರಿಂದಾದ ಲಾಭವೇನು?

**ಆ ಮನುಷ್ಯನು ಬದಲಾದನು**

ಕೆಲವಾರು ಪರಿಣಾಮಗಳನ್ನು ಈಗಾಗಲೇ ನೋಡಿದ್ದೇವೆ, ಅವನ ಜೀವನ ಸಂಪೂರ್ಣ ತಿರುಗಿಕೊಂಡಿತು, ಯೇಸುವನ್ನು ಸಂಧಿಸಿದ ನಂತರ ಅವನಲ್ಲಾದ ಬದಲಾವಣೆಗಳು ಭಿನ್ನ ವಾಗಿವೆ.

**ಅಲ್ಲಿ ವಾಸಿಸಿದ್ದ ಜನರಲ್ಲಿ ಬದಲಾವಣೆಯಾಗಲಿಲ್ಲ**

ಈ ಘಟನೆಯ ನಿಮಿತ್ತ ಹೆಚ್ಚು ಜನರಲ್ಲಿ ಸಂತೋಷ ಉಂಟಾಗಲಿಲ್ಲ. ತಮ್ಮ ಸಹೋ ದರನಿಗೆ ಅದ್ಭುತ ಉಂಟಾಯತು ಎಂಬ ವಿಚಾರದಲ್ಲಿ ಆಶ್ಚರ್ಯವ್ಯಕ್ತಪಡಿಸಲಿಲ್ಲ" (ವಚನ 15ಬಿ). ಅವರಲ್ಲಿದ್ದ ಇನ್ನೂ ಅಧಿಕವಾದ ಹಂದಿಗಳನ್ನು ಕಳಕೊಳ್ಳುವ ಭೀತಿಯಲ್ಲಿದ್ದರು ಅವರು ಮನುಷ್ಯರ ಬಗೆಗೆ ಚಿಂತಿಸದೆ ಹಂದಿಗಳ ಬಗ್ಗೆಯೇ ಚಿಂತಿಸಿದರು ಎಂಬ ಸೂಚನೆಯು ಇಲ್ಲಿರುತ್ತದೆ. ಆತ್ಮಗಳಿಗಿಂತಲೂ, ಹಂದಿಗಳೇ ಅವರಿಗೆ ಪ್ರಮುಖವಾಯಿತು. ನಂಬಿಕೆಗಿಂತಲೂ ಒಣಗಿಸಿದ ಹಂದಿಯ ಮಾಂಸವು ಪ್ರಮುಖ ಸ್ಥಾನಪಡೆಯಿತು.

"ಅವರು ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಯೇಸುವನ್ನು ಬೇಡಿ ಕೊಂಡರು" (ವಚನ 17). ಅವರ ಸೀಮೆಯಲ್ಲಿ ಇದ್ದ ದೆವ್ವಹಿಡಿದ ಇತರರು ಗುಣವಾಗಬೇಕು ಎಂಬ ಆಶೆ ಅವರಲ್ಲಿರಲಿಲ್ಲ. ಅದರ ಬದಲು "ಹೊರಹೋಗು" ಅಂದರು!

ಅವರ ಮನವಿಯನ್ನು ಯೇಸು ಈಡೇರಸಿದನು. ಅವರು ಇನ್ನು ಹೆಚ್ಚಿನ ಮನವಿಯನ್ನು ಮಾಡುವ ಮೊದಲೇ ಯೇಸು ಆ ಸ್ಥಳವನ್ನು ಬಿಟ್ಟನು. ಆತನನ್ನು ಇಷ್ಟ ಪಡದ ಜನರ ಮಧ್ಯದಲ್ಲಿ ಆತನು ಇರಲು ಇಚ್ಚಿಸಲಿಲ್ಲ, ದೇವರ ಮಾರ್ಗವನ್ನು ಅವರಿಗೆ ಒತ್ತಾಯ ಪೂರ್ವಕವಾಗಿ ಹೇಳಲಿಲ್ಲ, ನಾವು ಸಹ ಅದನ್ನು ಮಾಡಬಾರದು.

**ಒಂದು ಕ್ಷೇತ್ರದ ಜನರಿಗೆ ಉಪದೇಶಿಸಲಾಯಿತು**

ಅಂತಿಮವಾದ ಪರಿಣಾಮವನ್ನು ತಿಳಿಸಲೇಬೇಕು: ಇತರರನ್ನು ಸಂಧಿಸುವುದು, ಸಂಧಿಸುವಂಥ ಕಾರ್ಯವನ್ನು ಹುಟ್ಟಿಸುತ್ತದೆ. ಉಳಿದಿರುವ ಕಥೆಯನ್ನು ಕೇಳಿರಿ:

> ಆತನು ದೋಣಿಯನ್ನು ಹತ್ತುವಾಗ ಆ ದೆವ್ವಹಿಡಿದಿದ್ದವನು- ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆಂದು ಆತನನ್ನು ಬೇಡತೊಡಗಿದನು. ಆದರೆ ಆತನು ಅವನನ್ನು ಇರಗೊಡದೆ ಅವನಿಗೆ - ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು. ಅವನು ಹೊರಟುಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೊಲಿ ಎಂಬ ಸೀಮೆಯಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು; ಎಲ್ಲರೂ ಆಶ್ಚರ್ಯಪಟ್ಟರು (ವಚನಗಳು 18-20).

ನಮಗೂ *ಸಹ* ಯೇಸು, "ನೀನು ನಿನ್ನ ಮನೆಗೂ, ನಿನ್ನ ಜನರ ಬಳಿಗೂ, ನಿನ್ನ ನೆರೆ ಹೊರೆಯವರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಮಾಡಿದ ಕಾರ್ಯಗಳನ್ನು ಹೇಳು" ಅನ್ನುತ್ತಾನೆ. ಕೆಲವರು ಈ ಸಂಗತಿಗೆ ವ್ಯತಿರಿಕ್ತವಾಗಿ, "ನನ್ನ ಸಭೆಗೆ ಸೇರದೆ

ಇರುವ ಬೇರೆ ಸ್ನೇಹಿತರು ನನಗಿರುವದಿಲ್ಲ" ಎಂದು ಹೇಳಬಹುದು. ಹಾಗಿದ್ದರೆ ಒಬ್ಬನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳಿ, ನೆರೆಯವರ ಸಂಗಡ ಸ್ನೇಹ ಬೆಳೆಸಿ. ನಂತರ ಅವರಿಗೆ ಸುವಾರ್ತೆ ಹೇಳಿರಿ, "ಒಬ್ಬ ಭಿಕ್ಷುಕನು ಇನ್ನೊಬ್ಬ ಭಿಕ್ಷುಕನಿಗೆ ಆಹಾರ ದೊರೆಯುವ ಸ್ಥಳವನ್ನು ತಿಳಿಸುವಂತೆಯೇ" ಸುವಾರ್ತಾ ಕಾರ್ಯವೂ ಸಹ ಇರುತ್ತದೆ. ವೇದನೆಗೊಂಡ ಒಬ್ಬನು, ವೇದನೆಗೊಂಡ ಮತ್ತೊಬ್ಬನಿಗೆ, ಬಿಡುಗಡೆ ಹೊಂದುವ ಸ್ಥಳದ ಬಗ್ಗೆ ತಿಳಿಸುವದೇ ನಾವುಗಳು ತಿಳಿಸುವ ಸುವಾರ್ತೆಯಾಗಿದೆ.

## ಮುಕ್ತಾಯ

ಚಾರ್ಲ್ಸ್ ಹಡ್ಸ್‌ರವರು ಪ್ರಸಂಗ ಮಾಡುವಾಗ ಹದಿನೆಂಟು ಇಂಚಿನ ಅಳತೆ ಪಟ್ಟಿಯನ್ನು ಬಳಸುತ್ತಿದ್ದರು. ಅದನ್ನು ಕೈಯಲ್ಲಿ ತೋರಿಸಿ, ಕೆಲವು ಕ್ರೈಸ್ತರು "ಇಷ್ಟು ಅಳತೆಯಲ್ಲಿಯೇ ಪರಲೋಕವನ್ನು ಕಳೆದುಕೊಳ್ಳುತ್ತಾರೆ ಎನ್ನುತ್ತಿದ್ದರು." ಅಳತೆ ಪಟ್ಟಿಯ ಒಂದು ತುದಿಯನ್ನು ತಲೆಯ ಬಳಿ, "ಇನ್ನೊಂದು ತುದಿಯನ್ನು ಹೃದಯದ ಬಳಿ ಹಿಡಿದು, ತಲೆಯಿಂದ, ಹೃದಯದವರೆಗಿನ ಅಂತರ ಎಂದು ಹೇಳುತ್ತಿದ್ದರು."[14]

ಇತರರಿಗೆ ಸುವಾರ್ತೆ ಸಾರಬೇಕು ಎಂಬ ಅಂಶವನ್ನು ಅನೇಕರಾದ ನಮ್ಮ ತಲೆಯಲ್ಲಿ ಇಟ್ಟುಕೊಂಡಿದ್ದೇವೆ (ಜ್ಞಾನದಿಂದ), ಪ್ರೀತಿ ಹೊಂದದವರಿಗೆ ಸಹಾಯಮಾಡಿ ಅದರೊಂದಿಗೆ ಸುವಾರ್ತೆ ಸಾರಬೇಕು ಎಂಬ ಆಲೋಚನೆಗಳನ್ನೂ ಹೊಂದಿದ್ದೇವೆ ಅದೇ ಸಮಯದಲ್ಲಿ ಆ ಸುವಾರ್ತಾ ಸಂದೇಶವು ನಮಮ ಹೃದಯಗಳನ್ನು ತಲುಪದೆ ಇರುವ ಸಾಧ್ಯತೆಯೂ ಇದೆ. ಭಯಬಿಟ್ಟವರಾಗಿ, ಶಿಸ್ತನ್ನು ಪಾಲಿಸುವವರಾಗಿ, ನಾವು ಮಾಡಬೇಕಾದ ಸಂಗತಿಗಳನ್ನು ಮಾಡುವಂಥ ಪ್ರಯತ್ನವನ್ನು ನಾವುಗಳು ಮಾಡದೆ ಇರಬಹುದು. "ಹೌದು ಹದಿನೆಂಟು ಇಂಚಿನ ಅಂತರಲ್ಲಿ, ನಮ್ಮಲ್ಲಿ ಕೆಲವರು ಪರಲೋಕವನ್ನು ಕಳಕೊಳ್ಳುವ ಸಾಧ್ಯತೆಯಿದೆ."[15]

ಅಂತಿಮವಾಗಿ, ಈ ಸಂದೇಶವನ್ನು ವ್ಯಕ್ತಿಗತಗೊಳಿಸಲು ಪ್ರಯತ್ನಿಸುತ್ತೇನೆ. ಯೇಸು ನಿನ್ನನ್ನು ಮುಟ್ಟಲು ಇಚ್ಚಿಸುತ್ತಾನೆ, ಆದರೆ ಗೆರೆಸೇನರನ್ನು ಒತ್ತಾಯಿಸದ ಹಾಗೆಯೇ ನಿಮ್ಮಲ್ಲಿಯೂ ಆತನು ನಡಕೊಳ್ಳುವವನಾಗಿದ್ದಾನೆ (ನೋಡಿ ಮಾರ್ಕ 16:15, 16). ನಿಮ್ಮ ಕೈಗಳನ್ನು ತಿರುಚಿ, ಈ ನಿನ್ನ ಪಾಪಗಳನ್ನು ಅರಿಕೆ ಮಾಡು ಎಂದಾಗಲೀ (ಯಾಕೋಬ 5:16). ನೀರಿನಲ್ಲಿ ಮುಳುಗು ಎಂದಾಗಲೇ ಒತ್ತಾಯ ಮಾಡುವುದಿಲ್ಲ. ಆತನನ್ನು ಹೃದಯದಲ್ಲಿ ಅಂಗೀಕರಿಸು. ವಿಧೇಯತೆಯಿಂದ ಆತನ ಪಾದಕ್ಕೆ ಅಡ್ಡಬೀಳು. ಪ್ರತಿಕ್ರಯಿಸಲು ಮನಸ್ಸಿದ್ದರೆ, ಅದನ್ನು ಈಗಲೇ ಮಾಡು.

## ಮಾಹಿತಿ

ಅನೇಕ ಸಂದರ್ಭಗಳಲ್ಲಿ ನನ್ನ ಕೇಳುಗರನ್ನು ಮುಂದಿನ ಸುವಾರ್ತಾ ಕಾರ್ಯಕ್ಕಾಗಿ ನಾನು ಸಿದ್ಧಪಡಿಸುತ್ತಿರುತ್ತೇನೆ. ಅವರಿಗೆ ನಾನು ಈ ಸುವಾರ್ತಾ ಕೂಟವು ಸುವಾರ್ತೆ ಹೇಳಲು ಅನೇಕರಿಗೆ ಅವಕಾಶ ಉಂಟುಮಾಡುತ್ತದೆ. "ಪ್ರೀತಿ ಇಲ್ಲದವರಿಗೂ, ಪ್ರೀತಿ ನೀಡುವ, ಸುವಾರ್ತಾ ಕೂಟ ಎಂದು ಹೇಳುತ್ತಿದೆ."

ಮೂವತ್ತಾರು ಅಡಿ ಇರುವ ಒಂದು ಅಳತೆ ಪಟ್ಟಿಯ ಅರ್ಧದಷ್ಟು ಅಂದರೆ ಹದಿನೆಂಟು ಇಂಚಿನ ಒಂದು ಅಳತೆ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಿರಿ. ಮೆಟ್ರಿಕ್ ರೂಲರನ್ನು ಸಹ ಬಳಸಬಹುದು. ಹದಿನೆಂಟು ಇಂಚು ಇರುವ ಅಂದಾಜಿನ ಪಟ್ಟಿಯನ್ನು ಸಹ ಬಳಸಿರಿ. ಇಷ್ಟು ಅಂತರದಲ್ಲಿ, ಕೆಲವರು ಪರಲೋಕ ರಾಜ್ಯವನ್ನು ಕಳಕೊಳ್ಳುವರು ಎಂದು ವಿವರಿಸಿರಿ.

ಟಿಪ್ಪಣಿಗಳು

[1]ಫ್ರಂಟಿಸೆಮೆಡರ್‌ರವರಿಂದ, ಈ ಅಧ್ಯಯನದ ಉಪಾಯವು ದೊರಕಿರುತ್ತದೆ. *Sermons for Today,* vol. 2 (Abilene, Tex.: Biblical Research Press, 1981), 134–41. ಈ ಭಾವ ಮತ್ತು ಉಪಾಯಗಳು ಆತನ ಪ್ರಸಂಗವಾದ "Reach Out, Reach Out and Touch Someone," ಎಂಬುದರಲ್ಲಿ ಕಾಣಬಹುದು. [2]ಅಪೊಸ್ತಲರನ್ನು, ಹತ್ತು ಜನ ಕುಷ್ಟರೋಗಿಗಳನ್ನು, ಬಾವಿಯ ಬಳಿಯಿದ್ದ ಸ್ತ್ರೀಯನ್ನು ಯೌವನಸ್ಥನಾದ ಐಶ್ವರ್ಯವಂತನನ್ನು, ಶಿಲುಬೆಯ ಮೇಲಿನ ಕಳ್ಳನನ್ನು ಹಾಗೂ ಇತರರನ್ನು ಸಂಧಿಸಿದ ಉದಾಹರಣೆಯನ್ನು ನೀಡಿರಿ. [3]ನಾವು ಆತನ ದೇಹದ ಭಾಗವಾಗಿದ್ದೇವೆ (ರೋಮಾಪುರ 12:5). [4]ಕ್ರಿಸ್ತನ ಹಾಗೂ ಅಪೊಸ್ತಲರ ಕಾಲದಲ್ಲಿ ದೆವ್ವ ಹಿಡಿದಿದ್ದವರ ಉದಾಹರಣೆಯನ್ನು ನೀಡಬಹುದು, ಆದರೆ ಅದು ಈಗ ಸಂಭವಿಸದು, *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿರುವ "ಅಧಿಕಾರ ಹೊಂದಿದವನು" ಎಂಬ ಪಾಠವನ್ನು ನೋಡಿರಿ. [5]ಪೂರ್ಣಕತ್ತಲಾಗಿರಲಿಲ್ಲ, ಆ ಮನುಷ್ಯನು ದೂರದಿಂದಲೇ ನೋಡಿರಬಹುದು (ಮಾರ್ಕ 5:6). ಅಥವಾ ಚಂದ್ರನ ಬೆಳಕು ಇರಬಹುದು. [6]Joe Schubert, "Overcoming Fear," *Preacher's Periodical* (December 1983): 27. [7]ನೆರೆಹೊರೆಯವರ ಹಾಗೆ ವರ್ತಿಸುವದು. [8]ಸಮಾಜದಲ್ಲಿ, ಒಂದು ಸಮಾನ್ಯವಾದ ಸಮಸ್ಯೆಯು ಉದ್ಭವಿಸುವಾಗ, ವ್ಯಯಕ್ತಿಕ ಜವಾಬ್ದಾರಿ ಹೊರುವ ಬದಲು, ಇನ್ನೊಂದು ಸಾಮಾನ್ಯ ಯೋಜನೆಯನ್ನು ರೂಪಿಸುವದು. ಪರಿಸ್ಥಿತಿಗನುಗುಣವಾಗಿ ಹೊಂದಾಣಿಕೆ ಮಾಡಿರಿ. [9]Meador, 138. Brother Meador ರವರು, ಹಲವು ಸಭೆಗಳು "ಬಾಡಿಗೆಗೆ ತಂದ ತುಫಾಕಿ" ಎಂಬ ಸಮಸ್ಯೆಗಳಿಂದ ನೆರಳುತ್ತಿವೆ. ಅಮೇರಿಕದಲ್ಲಿನ ಪೂರ್ವದಲ್ಲಿ ಹಲವರು "ತುಫಾಕಿಗಳನ್ನು" (ಅಂದರೆ, ತುಫಾಕಿಯುಳ್ಳ ಮನುಷ್ಯರು) ಬಾಡಿಗೆಗೆ ತೆಗೆದುಕೊಂಡು ಅವರ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುತ್ತಿದ್ದರು. ಸಭೆಗೆ ಅನ್ವಯಿಸುವಾಗ, "ಬಾಡಿಕೆಯ ತುಫಾಕಿಯ" ಮನೋಭಾವವು, "ನಾವು ಮಾಡಬೇಕಾಗಿರುವ ಕೆಲಸವನ್ನು ನಮಗಾಗಿ ಮಾಡುವದಕ್ಕೆ ಒಬ್ಬ ಉಪದೇಶಕನನ್ನು ಬಾಡಿಗೆಗೆ ತೆಗೆದುಕೊಳ್ಳೋಣ. ಅದರಿಂದ ಕಾರ್ಯಪೂರ್ಣವಾಗದಿದ್ದರೆ, ಅನೇಕ ಕೆಲಸಗಾರರನ್ನು ಬಾಡಿಗೆಗೆ ಇಟ್ಟುಕೊಳ್ಳೋಣ (ಅಂದರೆ ಸಭೆಯ ಅನೇಕ ಕೆಲಸಗಾರರು)." ನಿಮಗೆ ತಿಳಿದಂತೆ ಬೇರೆಯೊಬ್ಬರ ಕೆಲಸವನ್ನು ಬಾಡಿಯ ಕೆಲಸಗಾರನು ಮಾಡಲಾರನು. ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಮಾಡಬೇಕು. [10]ಮಾರ್ಕ 5:15 ದೆವ್ವ ಅವನನ್ನು ಬಿಟ್ಟು ಹೋದ ಮೇಲೆ "ಅವನು ಸ್ವಸ್ಥ ಚಿತ್ತನಾದನು."

[11]KJVಯಲ್ಲಿ, "ಆಳ" ಗ್ರೀಕ್‌ನಲ್ಲಿ "ಪಾತಾಳ." [12]ದೆವ್ವಗಳ ಚಲನ ಚಿತ್ರದಲ್ಲಿನ "ಹಂದಿಗಳ ಸ್ವರವನ್ನು ಬಳಸುವರು." [13]ಅಮೇರಿಕೆಯಲ್ಲಿ, ಹಂದಿಗಳು ಕೂಡಿಹಾಕಿ ಸಾಕುವರು. ಮತ್ತು ಮೈದಾನದಲ್ಲಿ ಮೇಯಿಸಿ ಸಾಕುವರು. [14]ಸತ್ಯವೇದದ "ಹೃದಯ" ಅಂದರೆ "ಎದೆ" ಭಾಗವಲ್ಲ, ದೃಷ್ಟಾಂತಕ್ಕೆ ಹೊಂದುತ್ತವೆ. [15]ಸಭೀಕರಿಗೆ ಒಂದು ಸದಾವಕಾಶ, ಅದಕ್ಕಾಗಿ ಸಮಯ, ಸ್ಥಳದ ಅನುಕೂಲತೆ.